

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಪರಿಪೂರ್ಣದೆಡೆಗೆ

ನಾಳೆ ಬಸವಜಯಂತಿ. ಮಹಾಮಾನವತಾವಾದಿ ಬಸವಣ್ಣನವರು ಜನ್ಮವೆತ್ತಿದ ಪುಣ್ಯದಿವಸ. ಹನ್ನೆರಡನೆಯ ಶತಮಾನದ ಶರಣ ಚಳುವಳಿಯ ನೇತಾರರಾಗಿದ್ದ ಬಸವಣ್ಣನವರ ವಚನಗಳನ್ನು ಸಂಗ್ರಹಿಸುವ, ಸಂಪಾದಿಸುವ, ಅನುವಾದಿಸುವ, ವ್ಯಾಖ್ಯಾನಿಸುವ ಕಾರ್ಯ ಅನೂಚಾನವಾಗಿ ನಡೆಯುತ್ತಲೇ ಬಂದಿದೆ. ಆದರೂ ಹಿಂದಿನ ಸಂಪಾದನಾಕಾರರು ಷಟ್‌ಸ್ಥಲ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಹೇಗಾದರೂ ಮಾಡಿ ಅದಕ್ಕೆ ಹೊಂದಿಸಬೇಕೆಂಬ ದೃಷ್ಟಿಯಿಂದ ಅದರ ಚೌಕಟ್ಟಿನೊಳಗೆ ವಚನಗಳನ್ನು ಸಂಕಲಿಸಲು ಪ್ರಯತ್ನಿಸಿದ್ದಾರೆ. ವಚನಗಳನ್ನು ಷಟ್‌ಸ್ಥಲ ಕ್ರಮದಲ್ಲಿ ಅಥವಾ ಏಕೋತ್ತರ ಶತಸ್ಥಲ ಕ್ರಮದಲ್ಲಿ ಸಂಪಾದಿಸಿಕೊಟ್ಟಿರುವ ಅವರ ಈ ಪ್ರಯತ್ನ ಆಕಾಶದಲ್ಲಿ ಸ್ವಚ್ಛಂದವಾಗಿ ವಿಹರಿಸುವ ಗಿಳಿಗಳನ್ನು ಪಂಜರದಲ್ಲಿ ಬಂಧಿಸಿಟ್ಟಂತೆ ಆಗಿದೆ. ಇಂಥ ಸಂಗ್ರಹಗಳಲ್ಲಿ ಸಂಗ್ರಹಿಸಿದವರ, ಸಂಪಾದಿಸಿದವರ ಅನುಭವಕ್ಕೆ ತಕ್ಕಂತೆ ವಚನಗಳ ವರ್ಗೀಕರಣವಾಗಿದೆ. ಈ ಸಂಕಲನಕಾರರು ಧಾರ್ಮಿಕ ಚೌಕಟ್ಟನ್ನು ಮೀರಿ ವಚನಗಳ ನೈಜ ಅರ್ಥವನ್ನು ಮುಖ್ಯವಾಗಿ ಮನದಲ್ಲಿಟ್ಟುಕೊಂಡು ಸಂಕಲಿಸಲು ಪ್ರಯತ್ನಿಸಿಲ್ಲ.

ಯಾವ ಶರಣರೂ ಈಗಿರುವಂತೆ ತಮ್ಮ ವಚನಗಳನ್ನು ಷಟ್‌ಸ್ಥಲ ಕ್ರಮದಲ್ಲಿ ರಚಿಸಿರಲಾರರು. ಶಂಕರ, ರಾಮಾನುಜ, ಮಧ್ವ ಮೊದಲಾದ ಆಚಾರ್ಯರು ಪ್ರಸ್ಥಾನತ್ರಯಗಳ (ಉಪನಿಷತ್ತು-ಭಗವದ್ಗೀತೆ-ಬ್ರಹ್ಮಸೂತ್ರ) ಮೇಲೆ ಭಾಷ್ಯಗಳನ್ನು ಬರೆದು ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದಂತೆ, ಬಸವಾದಿ ಶಿವಶರಣರು ಯಾವುದೋ ಒಂದು ಹೊಸ ಸಿದ್ಧಾಂತದ ಪ್ರತಿಪಾದಕರಾಗಿ ವಚನಗಳನ್ನು ರಚನೆ ಮಾಡಿದವರಲ್ಲ. ಜನರ ಲೌಕಿಕ ಮತ್ತು ಪಾರಲೌಕಿಕ ಬದುಕಿನ ಒಳ-ಹೊರಗನ್ನು ದೃಷ್ಟಿಯಲ್ಲಿರಿಸಿಕೊಂಡು ಸ್ವತಂತ್ರವಾಗಿ ಚಿಂತನೆ ನಡೆಸಿ ತಮ್ಮ ವಿಚಾರಗಳನ್ನು ಪರಿಪಕ್ವವಾದ ಸ್ವಾನುಭವದ ಮೂಸೆಯಲ್ಲಿ ಗಟ್ಟಿಗೊಳಿಸಿ ಬರೆದವರು. ಒಂದು ನಿರ್ದಿಷ್ಟ ಕಾಲಮಾನದಲ್ಲಿ ಬರೆದ ಅವರ ವಚನಗಳು ಆ ಕಾಲಕ್ಕೆ ಸೀಮಿತವಾಗದೆ ಸಾರ್ವಕಾಲಿಕ ಸತ್ಯವನ್ನು ಒಳಗೊಂಡಿವೆ. ಅವರ ವಚನಗಳಲ್ಲಿ ಸಿದ್ಧಾಂತವನ್ನು ಕಾಣಬಹುದಾದರೂ ಸಿದ್ಧಾಂತದ ಪ್ರತಿಪಾದನೆಯೇ ವಚನಗಳ ಮೂಲ ಉದ್ದೇಶವಾಗಿರಲಿಲ್ಲ. ಆದರೆ ಸಂಕಲನಕಾರರು ಅವುಗಳನ್ನು ಸ್ಥಲಗಳ ಕ್ರಮದಲ್ಲಿ ವರ್ಗೀಕರಿಸುವುದರ ಮೂಲಕ ಒಂದು ಧಾರ್ಮಿಕ ಚೌಕಟ್ಟನ್ನು ವಿಧಿಸಿ ವಚನಗಳ ಸ್ವತಂತ್ರ ವಿಚಾರಧಾರೆಗೆ ತಡೆಗೋಡೆಯನ್ನು ಒಡ್ಡಿದ್ದಾರೆ ಎಂದೆನಿಸುತ್ತದೆ.

ಜಗತ್ತಿನ ಮಹಾಪುರುಷರನೇಕರು ಸ್ವತಃ ಬರೆದಿರುವುದು ಅತ್ಯಲ್ಪ ಅಥವಾ ಇಲ್ಲವೇ ಇಲ್ಲ. ನಿಕಟವರ್ತಿಗಳಾದ ಅವರ ಅನುಯಾಯಿಗಳು ಆ ಚಿಂತನೆಗಳನ್ನು ಬರೆದು ದಾಖಲೆಗೊಳಿಸಿದರು. ಆ ಚಿಂತನೆಗಳು ಅವರ ನಿಕಟ ಅನುಯಾಯಿಗಳು ದಾಖಲಿಸಿರುವುದರಿಂದ ಆಯಾಯ ಮಹಾಪುರುಷರ ಆಲೋಚನೆಗಳಿಗೆ ಅತ್ಯಂತ ಸಮೀಪ ಎನ್ನಬಹುದೇ ಹೊರತು ಅವರೇ ಬರೆದಿಟ್ಟಷ್ಟು ಸಾಚಾ ಆಗಿವೆ ಎನ್ನಲು ಬರುವುದಿಲ್ಲ. ಯಾರೇ ಆಗಲಿ ತಮ್ಮ ವಿಚಾರಗಳನ್ನು ತಾವೇ ಬರೆಯುವುದಕ್ಕೂ ಅವುಗಳನ್ನು ಬೇರೆಯವರು ಬರೆಯುವುದಕ್ಕೂ ವ್ಯತ್ಯಾಸ ಇದ್ದೇ ಇರುತ್ತದೆ. ಆದರೆ ಬಸವಾದಿ ಶಿವಶರಣರ ವಿಷಯದಲ್ಲಿ ಹೀಗಾಗಿಲ್ಲ. ಅವರೆಲ್ಲರೂ ತಂತಮ್ಮ ವಿಚಾರಧಾರೆಗಳನ್ನು ತಮ್ಮ ವಚನಗಳಲ್ಲಿ ದಾಖಲಿಸಿದ್ದು ಅವರ ಚಳುವಳಿಯ ಮೂಲಸ್ವರೂಪದರ್ಶನ ಆಗುತ್ತದೆ. ಆದರೆ ಕಾಲಕ್ರಮದಲ್ಲಿ ರಚಿತವಾದ ಶೂನ್ಯಸಂಪಾದನೆಯಂತಹ ಗ್ರಂಥಗಳಲ್ಲಿ ವಚನಗಳನ್ನು ಬಳಸಿಕೊಂಡು ಸನ್ನಿವೇಶಗಳನ್ನು ಕಟ್ಟಿಕೊಡುವ, ಅನುಭವ ಮಂಟಪದ ಗೋಷ್ಠಿಗಳನ್ನು ಚಿತ್ರಿಸುವ ಸಂದರ್ಭದಲ್ಲಿ ಅನೇಕ ಪ್ರಕ್ಷಿಪ್ತ ವಚನಗಳನ್ನು ಅಯಾ ಶರಣರ ಅಂಕಿತದಲ್ಲಿ ಸಂಕಲನಕಾರರು ಬರೆದು ಸೇರಿಸಿದ್ದಾರೆ. ವಚನಕಾರರ ಚಳುವಳಿಯು ಅವರ ಕಾಲಾನಂತರ ದಿಕ್ಕುತಪ್ಪಿ ಮತ್ತೆ ಕರ್ಮಠತನಕ್ಕೆ ಸಿಲುಕಿರುವುದು ದುರದೃಷ್ಟಕರ.

ಸ್ಥಲಾನುಸಾರ ವರ್ಗೀಕರಿಸಲಾದ ವಚನಗಳ ಸಂಕಲನವನ್ನು ಓದುವವರು ಅದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಷಟ್‌ಸ್ಥಲ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಬಸವಣ್ಣನವರ ವಿಚಾರಗಳನ್ನು ಅತಿ ಸುಲಭವಾಗಿ ತಿಳಿಸಬಲ್ಲ ವಚನಗಳು ಯಾವುದೋ ಸ್ಥಲದ ಯಾವುದೋ ಮೂಲೆಯಲ್ಲಿ ಸೇರ್ಪಡೆಯಾಗಿ ಜನಸಾಮಾನ್ಯ ಓದುಗರ ಗಮನ ಸೆಳೆಯುವಲ್ಲಿ, ಸಂವಹನೆ ಕಲ್ಪಿಸುವಲ್ಲಿ ವಿಫಲವಾಗಿವೆ. ಒಂದು ವಚನ ಎಷ್ಟೇ ಉತ್ತಮ ವಚನವಾಗಿದ್ದರೂ ತಾತ್ವಿಕ ಹಿನ್ನೆಲೆಯ ಸ್ಥಲವಾರು ವರ್ಗೀಕರಣದಿಂದ ಓದುಗರ ಕೈಗೆ ಸುಲಭವಾಗಿ ಎಟುಕದೇ ಕಣ್‌ತಪ್ಪಿ ಹೋಗುತ್ತವೆ. ಹೀಗಾಗಿ ಆಸಕ್ತ ಓದುಗ ತತ್ವಭಾರಭರಾಕ್ರಾಂತನಾಗಿ ನಿರಾಸೆಯಿಂದ ವಚನವಾಙ್ಮಯಕ್ಕೆ ಬೆನ್ನು ತಿರುಗಿಸುವ ಅಪಾಯವಿದೆ.

ಬಸವಣ್ಣನವರನ್ನು ಕುರಿತು ಅನೇಕ ಗ್ರಂಥಗಳು ಈಗಾಗಲೇ ಕನ್ನಡ ಸಾರಸ್ವತ ಲೋಕದಲ್ಲಿ ಉಪಲಬ್ಧವಿವೆ. ಅನೇಕರು ಬಸವಣ್ಣನವರ ವಿಚಾರಧಾರೆಯನ್ನು ಸಂದರ್ಭಾನುಸಾರ ಅವರ ವಚನಗಳನ್ನು ಉಲ್ಲೇಖಿಸಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ಇಂಥ ಗ್ರಂಥಗಳಲ್ಲಿ ವಿದ್ವಾಂಸರು ಬಸವಣ್ಣನವರ ವಿಚಾರದಾರೆಯನ್ನು ನಿರ್ಧರಿಸುವಾಗ ಅವರ ಮನಸ್ಸಿನಲ್ಲಿ ಕೆಲವು ಆಯ್ದ ವಚನಗಳೋ, ವಚನಗಳ ಸಾಲುಗಳೋ ಹೊಳಹು ನೀಡಿರುತ್ತವೆ. ಮೇಲೆ ವಿವರಿಸಿದಂತೆ ಹಿಂದಿನ ಸಂಕಲನಕಾರರು ವಚನಗಳನ್ನು ವೀರಶೈವ ಧರ್ಮದ ದಾರ್ಶನಿಕ ಸಿದ್ಧಾಂತವಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳ ಏರಿಕೆಯ ಕ್ರಮದಲ್ಲಿ ಜೋಡಿಸಿದ್ದಾರೆ. ಹೀಗೆ ಬಸವಣ್ಣನವರ ವಚನಗಳನ್ನು ಯಾವುದೇ ಮತಧರ್ಮದ ಸೈದ್ಧಾಂತಿಕ ಚೌಕಟ್ಟಿಗೆ ಒಳಪಡಿಸದೆ ಇವತ್ತಿನ ಜನರ ಮನಸ್ಸನ್ನು ಅರಿತು ಯಾವುದೇ ಧರ್ಮದವರಿರಲಿ ಬಸವಣ್ಣನವರ ವಿಚಾರಧಾರೆಯನ್ನು ಅವರ ವಚನಗಳ ಮೂಲಕವೇ ನೇರವಾಗಿ ಅರಿತುಕೊಳ್ಳಲು

ಸಹಾಯಕವಾಗುವ ರೀತಿಯಲ್ಲಿ ಅವರ ವಚನಗಳನ್ನು ವರ್ಗೀಕರಿಸಿ ಓದುಗರಿಗೆ ನೀಡುವ ಅಗತ್ಯವಿದೆ. ಅಂತಹ ಪ್ರಯತ್ನ ಇತ್ತೀಚೆಗೆ ನಡೆಯುತ್ತಿದೆ. ವಚನಗಳಲ್ಲಿರುವ ವಿಚಾರಗಳ ಆವಿಷ್ಕಾರ ಮತ್ತು ಭಾವತೀವ್ರತೆಯ ಕ್ರಮದಲ್ಲಿ ಜೋಡಿಸುವ ಪ್ರಯತ್ನ ಅವರ ವಿಚಾರಧಾರೆಯನ್ನು ಅವರ ವಚನಗಳ ಬೆಳಕಿನಲ್ಲಿಯೇ ಓದುಗರು ಸುಲಭವಾಗಿ ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ. ಆ ಕಾರಣಕ್ಕಾಗಿಯೇ ಪರಂಪರಾಗತವಾಗಿ ರೂಢಿಯಲ್ಲಿರುವಂತೆ ವಚನಗಳನ್ನು ಸ್ಥಲಾನುಸಾರ ವರ್ಗೀಕರಣ ಮಾಡದೆ, ಅದಕ್ಕೆ ಬದಲಾಗಿ ವಚನಗಳನ್ನು ಅವು ಒಳಗೊಂಡಿರುವ ವಿಷಯಗಳ ಪ್ರಕಾರ ವಿಂಗಡಿಸಿ ಕೊಟ್ಟಿರುವ ಆ ಕ್ರಮದಲ್ಲಿ ವಚನಗಳನ್ನು ಓದುವುದರಿಂದ ಆಯಾ ವಿಷಯಗಳನ್ನು ಕುರಿತು ಬಸವಣ್ಣನವರ ಅಭಿಪ್ರಾಯಗಳೇನು ಎಂಬುದನ್ನು ಸುಲಭವಾಗಿ ತಿಳಿಯಬಹುದಾಗಿದೆ; ಓದುಗರು ಬಸವಣ್ಣನವರ ವಿಚಾರಧಾರೆಯನ್ನು ತಮಗೆ ತಾವೇ ಮೂಲ ವಚನಗಳ ಬೆಳಕಿನಲ್ಲಿಯೇ ಕಂಡುಕೊಳ್ಳಬಹುದಾಗಿದೆ. ಉದಾಹರಣೆಗೆ ಈ ಕೆಳಗಿನ ಎರಡು ವಚನಗಳನ್ನು ಗಮನಿಸಿ.

> ವಚನದಲ್ಲಿ ನಾಮಾಮೃತ ತುಂಬಿ,
> ನಯನದಲ್ಲಿ ನಿಮ್ಮ ಮೂರುತಿ ತುಂಬಿ,
> ಮನದಲ್ಲಿ ನಿಮ್ಮ ನೆನಹು ತುಂಬಿ,
> ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ,
> ಕೂಡಲಸಂಗಮದೇವಾ
> ನಿಮ್ಮ ಚರಣಕಮಲದೊಳಗಾನು ತುಂಬಿ !
>
> ಕಣ್ಣುಗಳು ತುಂಬಿದ ಬಳಿಕ ನೋಡಲಿಲ್ಲ,
> ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
> ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
> ಮನ ತುಂಬಿದ ಬಳಿಕ ನೆನೆಯಲಿಲ್ಲ
> ಮಹಾಂತ ಕೂಡಲಸಂಗಮದೇವನ !

ಈ ವಚನಗಳು ಷಟ್‌ಸ್ಥಲ ಕ್ರಮದಲ್ಲಿ ಅನುಕ್ರಮವಾಗಿ ವಚನ ಸಂಖ್ಯೆ 494, 855 ರಲ್ಲಿ ಬರುತ್ತವೆ. ಅಷ್ಟೊಂದು ಅಂತರದಲ್ಲಿರುವ ಈ ಎರಡು ವಚನಗಳನ್ನು ಒಟ್ಟಿಗೆ ಓದುವಾಗ ಆಗುವ ಅನುಭೂತಿಯೇ ಬೇರೆ. 'ತುಂಬಿ/ದ' ಎಂಬ ಶಬ್ದಪ್ರಯೋಗವಿರುವ ಈ ಎರಡು ವಚನಗಳನ್ನು ಒಟ್ಟೊಟ್ಟಿಗೆ ಓದುವಾಗ ಉದ್ಭವಿಸುವ ಅರ್ಥದ ಹೊಳಹು ಈ ವಚನಗಳನ್ನು ಭಿನ್ನ ಭಿನ್ನ ಕಡೆಗಳಲ್ಲಿ ಓದಿದಾಗ ಉಂಟಾಗುವುದಿಲ್ಲ; ಒಂದಕ್ಕೊಂದಕ್ಕೆ ಇರುವ ಸಂಬಂಧ ಸುಲಭವಾಗಿ ಗೋಚರಿಸುವುದಿಲ್ಲ. ಇವೆರಡೂ ವಚನಗಳನ್ನು ಒಟ್ಟಿಗೆ ಓದಿದಾಗ ಭಕ್ತನ ಸಾಧನೆ ಮತ್ತು ಸಿದ್ಧಿಯ ವಿಭಿನ್ನ ಅವಸ್ಥೆಗಳನ್ನು ನಿಚ್ಚಳವಾಗಿ ಕಾಣಬಹುದಾಗಿದೆ. ಸಾಧನಾವಸ್ಥೆಯಲ್ಲಿ ಜೀವಾತ್ಮ ಮತ್ತು ವಿಶ್ವಾತ್ಮನ ಮಧ್ಯೆ ಇರುವ 'ನಾನು, ನೀನು' ಎಂಬ ಭೇದ ಸಿದ್ಧಿಯ ಅವಸ್ಥೆಯನ್ನು ಮುಟ್ಟಿದಾಗ ಇರುವುದಿಲ್ಲ. ಎತ್ತರದ ಪರ್ವತವನ್ನು ಏರಲು ಹೊರಟ ಪರ್ವತಾರೋಹಿಗೆ ಏರುವ ಮೊದಲು ಕಾಣುವ ಪರ್ವತ ಏರಿದ ಮೇಲೆ ಕಾಣಿಸುವುದಿಲ್ಲ. "ನಯನದಲ್ಲಿ ನಿಮ್ಮ ಮೂರುತಿ ತುಂಬಿ" ಎಂಬ ವಚನದ ಸಾಲಿನ ಮುಂದುವರಿದ ಅನುಭಾವವೇ "ಕಣ್ಣುಗಳು ತುಂಬಿದ ಬಳಿಕ ನೋಡಲಿಲ್ಲ". ಇದೇ ರೀತಿ "ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ" ಎಂಬ ವಚನದ ಮುಂದುವರಿದ ಆಧ್ಯಾತ್ಮಿಕ ಸಿದ್ಧಿಯೇ "ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ". ಅಂತೆಯೇ "ಮನದಲ್ಲಿ ನಿಮ್ಮ ನೆನಹು ತುಂಬಿ" ಎಂಬ ವಚನದ ಸಾಲಿನಲ್ಲಿರುವ ಅನುಭವದ ಮುಂದಿನ ದಿವ್ಯಾನುಭೂತಿಯೇ "ಮನ ತುಂಬಿದ ಬಳಿಕ ನೆನೆಯಲಿಲ್ಲ"! ಅದುವೇ ನಾನೀನೆಂಬ ಉಭಯವನಳಿದು ತಾನುತಾನಾದ ಐಕ್ಯಸ್ಥಿತಿ! ಬೆಳಗು ಬೆಳಗನೆ ಕೂಡಿದ ಮಹಾಕೂಟ!

5.5.2011

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑